ಮಧ್ಯಂತರ ಅರ್ಜಿ ಸಂ. 12 ಮತ್ತು 13 ರ ಮೇಲಿನ ಆದೇಶದಂತೆ ಇಂದು ದಿನಾಂಕ 11-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ. ಕೆ.ಎ.ಜಿ. ವಕೀಲರಿಂದ

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿ: 07-11-2025 ರಂದು ನಗರಸಭೆ ಕಾರ್ಯಾಲಯ, ಸಿಂಧನೂರು ಇವರು ನೀಡಿದ ಹಿಂಬರಹ ಹಾಜರುಪಡಿಸಿದ್ದು, ಅದನ್ನು ನಿ.ಪಿ. 4 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎನ್.ಆರ್.ಜಿ. ವಕೀಲರಿಂದ

ನಗರಸಭೆ ಕಾರ್ಯಾಲಯ ಸಿಂಧನೂರು ಇವರಿಗೆ ನಾನು ಎನ್.ಎ. ಮತ್ತು approved layout ದಾಖಲೆಗಳನ್ನು ಪೂರೈಸುವಂತೆ ಅರ್ಜಿ ಸಲ್ಲಿಸಿದ್ದು, ಅದರ ಜೊತೆಗೆ ಯಾವ ದಾಖಲೆಗಳನ್ನು ನಾನು ನೀಡಿದ್ದೆ ಎಂದು ನನಗೆ ಗೊತ್ತಿಲ್ಲ. ನಾನು 2013 ರಲ್ಲಿ ಖರೀದಿ ಪಡೆದ ನಿ.ಪಿ. 2 ಆಸ್ತಿಗೆ ಸಂಬಂಧಿಸಿದಂತೆ ಅದರ ಚೆಕ್‌ಬಂದಿ ಕುರಿತು ದಾಖಲೆಗಳನ್ನು ಉಪನೊಂದಣಾಧಿಕಾರಿಯವರಿಗೆ ನೀಡಿಲ್ಲ ಎಂದರೆ ಸರಿ. Approved lay out ಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ನಗರಸಭೆ ಕಾರ್ಯಾಲಯ ಸಿಂಧನೂರಿನಲ್ಲಿ ಇಲ್ಲ ಆ ಕಾರಣ ಅವರು ಸದರಿ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿ: 07-11-2025 ಕ್ಕೂ ಮೊದಲು ನಾವು ನಗರಸಭೆ ಸಿಂಧನೂರು ಇವರಿಗೆ Approved lay out ಕುರಿತು ದಾಖಲೆಗಳನ್ನು ಪೂರೈಸುವಂತೆ ಅರ್ಜಿಗಳನ್ನು ಸಲ್ಲಿಸಿದ್ದೇವು. ಸದರಿ ಅರ್ಜಿಗಳ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಕುರಿತು ನನಗೆ ಈಗ ನೆನಪಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಸಿಂಧನೂರು.